ಬಾಗಿಲು,

ಸೂರ್ಯಕಾಂತಿಯ ಪುಷ್ಪ ಕುಂಡಗಳು
ಎಚ್ಚರವಿರಲಿ ಉಂಟು ಕಲ್ಲು ಮುಳ್ಳು
ತಳದಲ್ಲಿ ಮಾತ್ರ ಸಿಗುವುದು ಮುತ್ತು!"

ಕರಮಚಂದ ಅದನ್ನು ತದೇಕ ದೃಷ್ಟಿಯಿಂದ ನೋಡಿದ. ಯೋಚನೆಯಲ್ಲಿ ಅವನ ಹಣೆಯಲ್ಲಿ ನೆರಿಗೆಗಳು ಮೂಡಿದ್ದವು.

"ಇದೇನು, ಚಾರ್ಲಿ?" ನಾನು ಕೇಳಿದೆ.

"ನೋಡಿ, ಇಲ್ಲಿ ದಿನಾಂಕವೂ ಇದೆ. ಅದು ಶನಿವಾರ ಇಳಿಸಂಜೆ. ಕತ್ತಲು ಗಾಢವಾಗುತ್ತಿತ್ತು. ದಬದಬನೆ ಯಾರೋ ಬಾಗಿಲು ಬಡಿದಂತಾಯ್ತು. ನಾನು ಕದ ತೆರೆದೆ. ನನ್ನನ್ನು ತಳ್ಳಿಕೊಂಡು ಒಳಗೆ ನುಗ್ಗಿದ ಒಬ್ಬ, ಬಾಗಿಲು ಮುಚ್ಚಿ, ಸುಮ್ಮನಿರು ಎಂದು ಸೂಚಿಸುವಂತೆ, ತನ್ನ ತುಟಿಯ ಮೇಲೆ ಬೆರಳಿರಿಸಿದ. ಆತ ತೀರಾ ಗಾಬರಿಯಾದಂತಿತ್ತು. ಅತ್ತ ಇತ್ತ ನೋಡುತ್ತಿದ್ದ. ಒಮ್ಮೊಮ್ಮೆ ಹೊರಗೆ ದಿಟ್ಟಿ ಹಾಯಿಸುತ್ತಿದ್ದ. ನಾನು ಏನಾಯಿತೆಂದು ಆತನನ್ನ ವಿಚಾರಿಸಿದೆ. ಆತ ತೀರಾ ಬಳಲಿದವನಂತೆ ಕಂಡ. ಆತನಿಗೆ ಕುಳಿತುಕೊಳ್ಳಲು ಸೂಚಿಸಿ, ನಾನು ಬಿಯರ್ ತರಲು ಬಾರ್ ರೂಮಿಗೆ ಹೋದೆ. ಪುನಃ ಬರುವಾಗ ಆತ ನಾಪತ್ತೆ. ಎಲ್ಲಿ ಹೋದನೆಂದು ನಾನು ಅತ್ತಿತ್ತ ನೋಡುವಾಗ, ಪಕ್ಕದ ಕೋಣೆಯಿಂದ ಆತ ಹೊರಬಂದ. ಆ ಕೋಣೆಯಲ್ಲಿ ನನ್ನ ಆಂಟಿಕ್‌ಗಳನ್ನು ಪೇರಿಸಿಟ್ಟಿದ್ದೆ... "

"ಸರಿಯಾಗಿ ನೆನಪು ಮಾಡಿಕೊಳ್ಳಿ, ಚಾರ್ಲಿ ನೀವು ಬಿಯರ್ ತರಲು ಹೋದಾಗ ಅವ್ನು ಹಜಾರದಲ್ಲೇ ಇದ್ನೋ ಅಥವಾ ಪಕ್ಕದ ಕೋಣೆಗೆ ಹೋಗಿದ್ದನೋ?"

"ನನ್ಗೆ ಸರಿಯಾಗಿ ನೆನಪಾಗದು... ಆಂ... ಅಲ್ಲಲ್ಲ, ನಾನು ಬಾರ್ ರೂಮಿಗೆ ಹೋಗಿ ಬರುವಾಗ ಇಲ್ಲೇ ಇದ್ದ. ಬಿಯರ್ ಕುಡ್ದೋನು ತನಗೊಂದು ಸಹಾಯ ಆಗಬೇಕೆಂದು ಹೇಳಿ, ನನ್ನ ಮೊಬೈಲ್ ಕೇಳಿದ. ಅದರಲ್ಲಿ ಆತ ಈ ಸಂದೇಶ ಛಾಪಿಸಿ, ಅದನ್ನು ಯಾವುದೋ ನಂಬರಿಗೆ ಕಳಿಸಿದ. ಆತ ತನ್ನ ಹೆಸರು ಚಿದಾನಂದ ಸ್ವಾಮಿ ಅಂತ ಹೇಳ್ದ ನೆನಪು. ಅಷ್ಟರಲ್ಲಿ ಆತ ಬಿಯರ್ ಮುಗಿಸಿ, ಪುನಃ ಕೇಳ್ದ. ತರಲು ಬಾರ್ ರೂಂಗೆ ಹೋಗ್ಬರುವಾಗ ಆಸಾಮಿ ಕಾಣಲಿಲ್ಲ. ಆಗ ಅವ್ನು ಪಕ್ಕದ ಕೋಣೆಯಿಂದ ಬಂದ. ಏನನ್ನೋ ಕಂಡಂತೆ ಅವ್ನ ಮೊಗದಲ್ಲಾಗ ಅತೀವ ಭೀತಿ! ಅಷ್ಟರಲ್ಲಿ ಹೊರಗೆ ಗೇಟು ಸದ್ದಾಯ್ತು. ನಾನು ಕಿಟಕಿಯಲ್ಲಿ ಇಣುಕಿದೆ. ಇಬ್ಬರು ಕಟ್ಟುಮಸ್ತಾದ ಆಳುಗಳು ನನ್ನ ಮನೆಯತ್ತ ಅನುಮಾನದ ದೃಷ್ಟಿ ಬೀರುತ್ತಾ ಬಂದು, ಬಾಗಿಲು ಬಡಿದರು. ತಕ್ಷಣ ಚಿದಾನಂದ ಚಿಗರೆಯಂತೆ ಪಕ್ಕದ ಕೊಠಡಿಗೆ ಓಡಿದ. ನಾನು ಆ ಅಪರಿಚಿತರನ್ನು ವಿಚಾರಿಸಿದೆ. ಅವರು 'ಇಲ್ಲಿಗೆ ಯಾರಾದ್ರೂ ಈಗ ಓಡಿ ಬಂದಿದ್ದರೆ' ಅಂತ ಪ್ರಶ್ನಿಸಿದರು. ನಾನು ಇಲ್ಲವೆಂದೆ. ಸುಳ್ಳು ಹೇಳಿದ್ರೆ ಗತಿ ನೆಟ್ಟಗಾಗೋಲ್ಲ ಅಂತ ಧಮಕಿ ಹಾಕಿದ್ರು. ನಾನು ತಕ್ಷಣ ಗಟ್ಟಿಯಾಗಿ ನೀವು ಇಲ್ಲಿಂದ ಹೊರಟು ಹೋಗದಿದ್ರೆ, ಶೂಟ್ ಮಾಡ್ಬೇಕಾಗುತ್ತೆ ಅಂತ ದಬಾಯಿಸಿದೆ. ಅವರು ನನ್ನ ಮಾತಿಂದ ಭಯಗೊಂಡಂತೆ ಕಂಡಿತು. ಕತ್ತಲಲ್ಲಿ ಕಾಲು ಕಿತ್ತರು. ಬಾಗಿಲು ಹಾಕಿ, ನಾನು ಒಳಗೆ ಹೋಗಿ ನೋಡ್ದಾಗ, ಚಿದಾನಂದ ಕಾಣಲಿಲ್ಲ. ಹಿಂದಿನ ಬಾಗಿಲು ಹಾರು ಹೊಡೆದಿತ್ತು. ಪ್ರಾಯಶಃ ಅವ್ನು ಆ ದಾರಿಯಾಗಿ ಪರಾರಿಯಾಗಿದ್ದಾನೆ ಅಂತ ಭಾವಿಸ್ದೆ."

"ಅವ್ನು ಯಾವ ನಂಬರಿಗೆ ಈ ಸಂದೇಶ ಕಳಿಸಿದ?"

ಚಾರ್ಲಿ ಮತ್ತೊಮ್ಮೆ ಚರವಾಣಿಯಲ್ಲಿ ಬೆರಳು ಆಡಿಸಿ, ಸಂಖ್ಯೆಯನ್ನು ಉಸುರಿದ. ಕರಮಚಂದ